ಬಿರುಸಿಗೇ ಆ ಬಿಲ್ಲು ಮುರಿದುಹೋಯಿತು. ಜನರೆಲ್ಲ ಹೋ ಎಂದು ಎದ್ದು ನಿಂತು ಬೊಬ್ಬೆ ಹಾಕಿದರು. ಹೊಸ ಬಿಲ್ಲು ತರಲು ಹೇಳಿದ. ಆದರೆ ಅಷ್ಟು ದೂರದಿಂದ ಗುರಿಯನ್ನು ತಲುಪಲು ಬೇಕಾದ ವೇಗೋತ್ಕರ್ಷವನ್ನು ಸಾಧಿಸಲು ಅಗತ್ಯವಾದ ಎಳೆತವನ್ನು ಈ ಯಾವ ಬಿಲ್ಲುಗಳೂ ಸೈರಿಸಿಕೊಳ್ಳುವಂತಿರಲಿಲ್ಲ.

ಆಗ ನನ್ನ ತಾತ ಜಯಸೇನನು ನನ್ನ ತಂದೆ ಸಿನಹುಗೆ ಕೊಟ್ಟಿದ್ದ ಬಿಲ್ಲನ್ನು ತರಲು ಹೇಳಿದೆ. ಮೂರು ನಾಲ್ಕು ಜನ ಪ್ರಯಾಸದಿಂದ ಅದನ್ನು ಶಸ್ತ್ರಾಗಾರದಿಂದ ತಂದುಕೊಟ್ಟರು. ಅದರ ಮೇಲಿದ್ದ ದೂಳನ್ನೆಲ್ಲ ಒದ್ದೆ ಬಟ್ಟೆಯಿಂದ ಒರೆಸಲೂ ಅವರೆಲ್ಲ ತಿಣುಕಾಡಿದರು. ಹೇಳುವುದೇನೋ ಹೇಳಿಬಿಟ್ಟೆ. ಒಂದು ವೇಳೆ ಅದನ್ನು ಹೆದೆಯೇರಿಸಲು ಸಿದ್ಧಾರ್ಥ ವಿಫಲನಾದರೆ ಎಂಥ ಅವಮಾನ ಎಂದು ನನಗೋ ಒಳಗೊಳಗೇ ಆತಂಕ. ಸಿದ್ಧಾರ್ಥ ಸಲೀಸಾಗಿ ಆ ಬಿಲ್ಲನ್ನೆತ್ತಿ ಹೆದೆಯೇರಿಸಿಯೇಬಿಟ್ಟ!

## ಯಶೋಧರೆ

ನಾನು ಸಿದ್ಧಾರ್ಥನನ್ನು ವರಿಸಿದಾಗ ಆತನ ವಯಸ್ಸು ಹದಿನಾರು. ನನಗೋ ಹದಿನಾಲ್ಕು. ನಮ್ಮ ಮದುವೆಯೂ ಆಗಿ, ಅದೂ ಇದೂ ಶಾಸ್ತ್ರ ಮುಗಿಸುವ ವೇಳೆಗೆ ನಾನೂ ಮೈನೆರೆದು ಸಂಸಾರ ಜೀವನ ಸಾಗಿಸುವಷ್ಟು ಪ್ರಬುದ್ಧಳಾಗಿದ್ದೆ. ತಂದೆ ಸುಪ್ರಬುದ್ಧರು ನಮ್ಮ ವಿವಾಹದಿಂದಾಗಿ ಶುದ್ಧೋದನನ ಕೆಂಗಣ್ಣಿಗೆ ಗುರಿಯಾಗದೆ ಆಂತರಿಕ ಸುಭದ್ರತೆಯ ವ್ಯವಹಾರ ನೋಡಿಕೊಳ್ಳುವ ಮಂತ್ರಿಯಾಗಿಯೇ ಮುಂದುವರೆದಿದ್ದರು. ಸುಮಾರು ಹತ್ತು ವರ್ಷಗಳ ಕಾಲ ನಮಗೆ ಮಕ್ಕಳೇ ಆಗಲಿಲ್ಲ. ಆದಾಗ್ಯೂ ನಮ್ಮ ದಾಂಪತ್ಯ ಜೀವನಕ್ಕೇನೂ ಧಕ್ಕೆಯಾಗಿರಲಿಲ್ಲ. ಸಿದ್ಧಾರ್ಥ ನನ್ನನ್ನು ಅತ್ಯಂತ ಪ್ರೀತಿಯಿಂದಲೇ ನೋಡಿಕೊಳ್ಳುತ್ತಿದ್ದ. ಯಾವಾಗ ಆತನ ಪ್ರೀತಿ ತುಂಬಿದ್ದ ಜೀವನ ಮುಂದುವರೆದಿತ್ತೋ ಆಗ ಶುದ್ಧೋದನ ತನ್ನ ಪತ್ನಿ ಗೌತಮಿಯ ಜತೆ ಕುಳಿತು, ರಾತ್ರಿ ಊಟವಾದ ನಂತರ ತಾಂಬೂಲ ಮೆಲ್ಲುವಾಗ,

‘ಇನ್ನು ನನಗೆ ಚಿಂತೆಯಿಲ್ಲ. ನನ್ನ ನಂತರ ಸಿದ್ಧಾರ್ಥ ಈ ಪ್ರಾಂತ್ಯದ ಸಮರ್ಥ ದೊರೆಯಾಗುತ್ತಾನೆ. ಆತನಿಗೆ ಅಲೌಕಿಕದ ಕಡೆಗಿನ ವ್ಯಾಮೋಹ ಹೋಗಿ ಲೌಕಿಕ ವ್ಯವಹಾರದಲ್ಲಿ ತೊಡಗಿದ್ದಾನೆ. ನಮ್ಮ ಮದುವೆ ಮಾಡುವ ಯೋಜನೆಯಿಂದಾಗಿ ಆತ ಪರಿವರ್ತನೆಯಾಗಿ ಹೋದ’ ಎನ್ನುತ್ತಿದ್ದವರು, ‘ಒಂದು ಮಗುವಾಗಿ ಬಿಟ್ಟಿದ್ದರೆ ಆತನ ಸಾಂಸಾರಿಕ ಬಂಧ ಇನ್ನಷ್ಟು ಬಿಗಿಯಾಗಿ ಲೌಕಿಕಕ್ಕೇ ಅಂಟಿಕೊಂಡು ಬಿಡುತ್ತಿತ್ತು’ ಎಂದರು. ಆಗ ದಿಢೀರನೆ ಆದ ನನ್ನ ಆಗಮನವನ್ನು ಕಂಡು, ‘ಇದೆಲ್ಲ ನಮ್ಮ ಯಶೋಧರೆಯ ತ್ಯಾಗದಿಂದ ಆದದ್ದು’ ಎಂದರು. ನನಗಾಗ ಆ ಮಾತಿನ ಹಿನ್ನೆಲೆ ಅರ್ಥವಾಗದೇ ಕೇಳಿದೆ. ಆಗ ಗೌತಮಿಯೇ, ‘ನಮ್ಮ ಸಿದ್ಧಾರ್ಥನನ್ನು ಆತನ ಗಮನ ಬೇರೆಡೆಗೆ ಸೆಳೆಯದಂತೆ ಪ್ರೀತಿಯಿಂದ ನೋಡಿಕೊಂಡಿರುವೆ, ನೀನು ಆದರ್ಶ ಪತ್ನಿ ಎಂದು ಅವರ ಮಾತಿನ ಅರ್ಥ’ ಎಂದವರು, ‘ಅಲ್ಲವೇ?...’ ಎಂದರು, ಗಂಡನ ಸಮರ್ಥನೆಯ ನಿರೀಕ್ಷೆಯಲ್ಲಿ. ನಾನು ಮುಗುಳ್ನಕ್ಕು ಓಡಿಬಂದೆ. ಇಬ್ಬರೂ ಹಿಂದಿನಿಂದ ನನ್ನನ್ನು ನೋಡುತ್ತಾ, ಮುಗ್ಧೆ ಎಂದು ಅಭಿಮಾನದಿಂದ ನಗುತ್ತಿದ್ದರು.

ಆಗಲೇ ನನಗೆ ಈವರೆಗೂ ನಮಗೆ ಮಕ್ಕಳಾಗಲಿಲ್ಲವಲ್ಲ ಎಂಬ ಕೊರಗು ಆರಂಭವಾದದ್ದು. ಶುದ್ಧೋದನರು ಹೇಳಿದಂತೆ ಒಂದು ಮಗುವಾಗಿಬಿಟ್ಟಿದ್ದರೆ ನನ್ನ–ಸಿದ್ಧಾರ್ಥನ ಬಂಧ ಇನ್ನಷ್ಟು ಗಟ್ಟಿಯಾಗುತ್ತಿತ್ತು ಎಂದು ಅನ್ನಿಸದಿರಲಿಲ್ಲ. ನಮ್ಮ ಜತೆಗೇ ಇದ್ದರೂ ನಮ್ಮ ವಿರುದ್ಧ ಕತ್ತಿ ಮಸೆಯುತ್ತಿದ್ದ ದೇವದತ್ತ ಆಗಾಗ್ಗೆ ಸಿದ್ಧಾರ್ಥನನ್ನು ಕೆಣಕುತ್ತಿದ್ದ. ಆತನ ಸಹಪಾಠಿಯೇ ಆದರೂ ಸಿದ್ಧಾರ್ಥನನ್ನು ಓಡಿಸಿ, ತಾನು ಸಿಂಹಾಸನವನ್ನು ಪಡೆಯಬೇಕೆಂಬ ಒಳ ಆಸೆ ಇತ್ತೋ ಏನೋ? ಏನೋ ಮಾತಿಗೆ, ‘ಏನು ಮಾಡಿ ಏನು ಪ್ರಯೋಜನ? ಮಕ್ಕಳಾಗದಿದ್ದರೆ ಮುಂದಿನ ವಾರಸುದಾರರೇ ಇಲ್ಲದಂತಾಗುತ್ತದಲ್ಲ...’ ಎಂದು ಕೆಣಕಿದ್ದ. ಆವರೆಗೆ ಆ ಬಗ್ಗೆ ತಲೆಕೆಡಿಸಿಕೊಳ್ಳದೆ ಕೇವಲ ಐಹಿಕ ಸುಖದಲ್ಲಿ ತೇಲುತ್ತಿದ್ದ ಸಿದ್ಧಾರ್ಥ ನನ್ನ ಬಳಿ ಪ್ರಸ್ತಾಪ ಮಾಡಿದ – ನಮಗೇಕೆ ಈವರೆಗೂ ಮಕ್ಕಳಾಗಲಿಲ್ಲವಲ್ಲವೆಂದು.

‘ರಾಜವಂಶದವರಿಗೆಅದೇನುಶಾಪವಿರುತ್ತದೋ ಗೊತ್ತಿಲ್ಲ. ಯುದ್ಧದ ಕಾರಣಕ್ಕೆ ಅನೇಕ ಸೈನಿಕರನ್ನು, ನಾಗರಿಕರನ್ನು ಬಲಿ ಪಡೆದುಕೊಂಡ ಪಾಪಕ್ಕೋ ಏನೋ ಮಕ್ಕಳಾಗುವುದೇ ಇಲ್ಲವಂತೆ’ ಎಂಬ ಮಾತು ನನ್ನನ್ನು ಇರಿಯಿತು. ‘ನಾವು ಯಾರಿಗೂ ಅನ್ಯಾಯ ಮಾಡಿಲ್ಲವಲ್ಲ. ಮೇಲಾಗಿ ನನಗೆ ತಿಳಿದಂತೆ ನಾವು ಯಾವ ಯುದ್ಧವನ್ನೂ ಮಾಡಿಲ್ಲ, ಯಾರ ಸಾವಿಗೂ ಕಾರಣವಾಗಿಲ್ಲ. ಅದಿರಲಿ, ಕನಿಷ್ಠ ಯಾರಿಗೂ ಹಿಂಸೆಯನ್ನೂ ಕೂಡ ಕೊಟ್ಟಿಲ್ಲ. ತಂದೆ ಶುದ್ಧೋದನರು ಕೂಡ ಅತ್ಯಂತ ಪ್ರಾಮಾಣಿಕವಾಗಿ ಆಡಳಿತ ನಡೆಸಿದ್ದಾರೆ. ಅಂಥದರಲ್ಲಿ ಇಂಥ ಶಿಕ್ಷೆ ಏಕೆ? ದೇವರಿಗೇನು ಕರುಣೆಯೇ ಇಲ್ಲವೇ?’ ಎಂದು ಪ್ರಲಾಪಿಸಿದೆ.

ಗೌತಮಿಯನ್ನೂ ಒಮ್ಮೆ ಕೇಳಿದ್ದೆ. ಮಾಯಾದೇವಿಗೂ ಸಿದ್ಧಾರ್ಥ ಹುಟ್ಟಿದ್ದು ಅನೇಕ ವರ್ಷಗಳ ನಂತರವೇ ಅಂತೆ. ಅದನ್ನು ಸಿದ್ಧಾರ್ಥನಿಗೆ ಹೇಳಿದೆ. ಆತ ಆ ಕ್ಷಣಕ್ಕೆ ಸಮಾಧಾನಗೊಂಡಂತೆ ಕಂಡರೂ, ‘ಇಲ್ಲ, ನಮಗೊಂದು ಮಗು ಶೀಘ್ರವಾಗಿ ಬೇಕು’ ಎಂದ. ಅದಕ್ಕಾಗಿ ನಾನು ಏನು ಮಾಡಬೇಕೋ ತಿಳಿದಿರಲಿಲ್ಲ. ಈ ವಿಚಾರವನ್ನು ಗೌತಮಿಯ ಬಳಿ ಕೇಳಲು ಒಂದೆರಡು ಬಾರಿ ಉಪಕ್ರಮಿಸಿದರೂ ನಾಚಿಕೆಯಿಂದ ಹಿಂಜರಿದೆ. ತಾಯಿ ಪಮಿತಾಳನ್ನೇ ಕೇಳುವುದು ಸೂಕ್ತವೆಂದು ಒಮ್ಮೆ ಅನ್ನಿಸಿತು. ಆದರೂ ಮುಜುಗರ. ಇನ್ನು ನನ್ನ ವಯಸ್ಸಿನ ಹುಡುಗಿಯರನ್ನು ಕೇಳೋಣವೆಂದರೆ ಯಾರೊಂದಿಗೂ ಅಷ್ಟೊಂದು ಸಲಿಗೆಯಿರಲಿಲ್ಲ. ನಾನು ಈ ಮನೆಯನ್ನು ಸೇರಿಕೊಂಡ ನಂತರ ಅವರೆಲ್ಲ ಅಸೂಯೆಯಿಂದಲೋ ಏನೋ ಹಾಗೆ ಹಾಗೇ ಹಿಂದಕ್ಕೆ ಸರಿದುಕೊಂಡಿದ್ದರು. ಇನ್ನು ದಾಸಿಯರನ್ನು ಕೇಳಿದರಂತೂ ಮುಗಿದೇ ಹೋಯಿತು, ನಾಳೆ ಬೆಳಕಾಗುವುದರೊಳಗಾಗಿ ಅಶರೀರವಾಣಿಯಂತೆ ಇಡೀ ಪ್ರಾಂತ್ಯದ ಎಂಬತ್ತು ಸಾವಿರ ಕುಟುಂಬಗಳಿಗೂ ವಿಷಯವನ್ನು ಹರಡಿಬಿಟ್ಟಿರುತ್ತಾರೆ. ಸರಿಯೆಂದು ನಾನೇ ಅನೇಕ ಪ್ರಯೋಗಗಳನ್ನು ಮಾಡಿದೆ. ನನಗೆ ತಿಳಿದಂತೆ ಒಂದೊಂದು ದಿನ ಒಂದೊಂದು ಆಸನದಲ್ಲಿ! ಮಕ್ಕಳಾಗುವುದೆಂದರೆ ಇಷ್ಟೊಂದು ಕಷ್ಟವೇ? ನಾಡಿನ ತುಂಬಾ ಇರುವ ಇಷ್ಟೊಂದು ಜನರೆಲ್ಲ ಹೀಗೇ ಕಷ್ಟಪಟ್ಟೇ ಹುಟ್ಟಿಬಂದಿರಬೇಕಲ್ಲವೇ ಎಂದು ನನಗೆ ನಾನೇ ಚಿಂತಿಸುತ್ತಿದ್ದೆ.

ಅಂತೂ ಕೆಲವೇ ದಿನಗಳಲ್ಲಿ ನನ್ನ ಫಲ ಫಲಿಸಿತು. ನನ್ನ ಒಡಲೊಳಗೂ ಒಂದು ಕುಡಿ ಚಿಗುರೊಡೆಯಿತು. ಸತತ ಎರಡನೇ ತಿಂಗಳೂ ನೀರು ಹಾಕಿಕೊಳ್ಳಲಿಲ್ಲವೆಂದು ಗಮನಿಸಿದ ಅತ್ತೆಯೇ ವಿಚಾರಿಸಿದರು. ಸಂಜ್ಞೆಗಳನ್ನು ಹಿಡಿದು ಪರಿಶೀಲಿಸಿದರು. ಅವರಿಗೆ ಖಾತ್ರಿಯಾದ ಮೇಲೆ ಶುದ್ಧೋದನನ ಕಿವಿಯಲ್ಲಿ ಉಸುರಿದರು. ನನಗೇ ಇನ್ನೂ ಖಾತ್ರಿಯಾಗದಿದ್ದರೆ ನಾನಾದರೂ ಸಿದ್ಧಾರ್ಥನಿಗೆ ಹೇಗೆ ಹೇಳಲಿ? ಮತ್ತೂ ಒಂದು ವಾರ, ಪಕ್ಷ ಕಾದೆ. ಆಗ ನನಗೇ ಒಂಥರ ಖಾತ್ರಿಯಾಗಲಾರಂಭಿಸಿತು. ಹೀಗ್ಹೀಗೆಂದು ಅನುಮಾನವಾಗುತ್ತಿದೆ ಎಂದು ಒಂದು ರಾತ್ರಿ ಮಲಗಿದಾಗ ಸಿದ್ಧಾರ್ಥನಿಗೆ ಹೇಳಿದೆ. ಬಹಳ ಖುಷಿಪಟ್ಟು ಮುದ್ದಾಡಿದ. ಎಲ್ಲ ತಂದೆಯರಂತೆ ಆತನೂ ಸಂಭ್ರಮದಿಂದ ಕುಣಿದಾಡಿದ. ಮುದ್ದುಮುದ್ದಾಗಿ ಹುಟ್ಟಿದ ಮಗುವಿಗೆ ರಾಹುಲ ಗೌತಮನೆಂದು ಹೆಸರಿರಿಸಲಾಯಿತು.

## ಸಿದ್ಧಾರ್ಥ

ರಾಹುಲ ಹುಟ್ಟುತ್ತಿದ್ದಂತೆಯೇ ಅರಮನೆಯ ತುಂಬೆಲ್ಲ ಅತ್ಯಂತ ಸಂತಸದ ವಾತಾವರಣ ತುಂಬಿಹೋಯಿತು. ನಾನು ಹುಟ್ಟಿದಾಗಲೂ ಇಷ್ಟು ಸಂಭ್ರಮ ಇರಲಿಲ್ಲವೆಂದು ಗೌತಮಿ ಹೇಳಿದಳು. ಆಗ ಅಮ್ಮ ಮಾಯಾಳ ಜೀವನ್ಮರಣದ ಮುಂದೆ ನನ್ನ ಜನನದ ಸಂಭ್ರಮ ಗೌಣವಾಗಿತ್ತಂತೆ. ಆದರೆ ಈಗ ಹಾಗಿರಲಿಲ್ಲ. ತಂದೆ ಶುದ್ಧೋದನ ಇನ್ನೂ ಗಟ್ಟಿಮುಟ್ಟಾಗಿ ಇದ್ದಾಗಲೇ ಮೊಮ್ಮಗ ಹುಟ್ಟಿದ್ದಾನೆ. ತನ್ನ ನಂತರ ನಾನು ಅಧಿಕಾರಕ್ಕೆ ಬರಬೇಕೆಂದು ಆತ ಬಯಸಿದ್ದರೂ, ನನ್ನ ಅನ್ಯಮನಸ್ಕತೆಯನ್ನು ಗಮನಿಸಿದ್ದ ಆತ ನಾನಲ್ಲದಿದ್ದರೂ ಪರವಾಗಿಲ್ಲ, ತನ್ನ ಮೊಮ್ಮಗ ಪ್ರಾಂತ್ಯದ ಸಾರ್ವಭೌಮತ್ವವನ್ನು ಮುಂದುವರೆಸಿಕೊಂಡು ಹೋಗುತ್ತಾನೆಂಬ ವಿಶ್ವಾಸ ಬೆಳೆಸಿಕೊಂಡುಬಿಟ್ಟಿದ್ದ.

ಸುಖದ ಲೋಲುಪ್ತತೆಯಲ್ಲಿ ನನಗೆ ಪ್ರಾಂತ್ಯದ ಯಾವ ಆಗುಹೋಗುಗಳ ಬಗ್ಗೆಯೂ ಗಮನವನ್ನೇ ಹರಿಸಲು ಅವಕಾಶ ನೀಡದೆ ತಾವೇ ಎಲ್ಲವನ್ನೂ ನೋಡಿಕೊಳ್ಳುತ್ತಿದ್ದರು. ನನ್ನ ಸೌಮ್ಯತೆ ಜನರನ್ನು ನಿಗ್ರಹಿಸಲು ಸಾಕಾಗುವಷ್ಟಿರಲಿಲ್ಲ ಎಂಬುದು ಅವರ ಭಾವನೆಯೂ ಆಗಿತ್ತೇನೋ. ಇದೇ ವೇಳೆ ಪ್ರತಿವರ್ಷದಂತೆ ಈ ವರ್ಷವೂ ದಶಕಗಳ ಹಿಂದಿನ ಕಾಲದ ರೋಹಿಣಿ ನೀರಿನ ಸಮಸ್ಯೆ ಮತ್ತೆ ಮುನ್ನೆಲೆಗೆ ಬಂದಿತ್ತು. (ಸಶೇಷ)